ಬೀದರ್‌ನಲ್ಲಿರುವ ಪಶುವೈದ್ಯ ವಿಶ್ವವಿದ್ಯಾನಿಲಯದಲ್ಲಿ ಅಕ್ರಮ ನೇಮಕಾತಿ ಬಗ್ಗೆ

113 (737) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ):– ಮಾನ್ಯ ಪಶುಸಂಗೋಪನಾ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೀದರ್‌ನಲ್ಲಿರುವ ಕರ್ನಾಟಕ ರಾಜ್ಯ ಪಶುವೈದ್ಯಕೀಯ ಮತ್ತು ಮೀನುಗಾರಿಕೆ ವಿಶ್ವವಿದ್ಯಾಲಯದಲ್ಲಿ ಯು.ಜಿ.ಸಿ. ಮತ್ತು ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಅಕ್ರಮ ನೇಮಕಾತಿ ಮತ್ತು ಬಡ್ತಿ ನೀಡಿರುವುದು ನಿಜವೇ; (ಅಕ್ರಮವಾಗಿ ನೇಮಕಾತಿ ಮತ್ತು ರೋಸ್ಟರ್ ಉಲ್ಲಂಘನೆ ಮಾಡಿ ಬಡ್ತಿ ನೀಡಿರುವ ವಿವರ ಒದಗಿಸುವುದು);

ಆ) ಈ ಸಂಬಂಧವಾಗಿ ಗುಲ್ಬರ್ಗಾ ಪ್ರಾದೇಶಿಕ ಆಯುಕ್ತರು ಕುಲಾಧಿಪತಿಗಳ ಮತ್ತು ಸರ್ಕಾರಕ್ಕೆ ತನಿಖಾ ವರದಿಯನ್ನು ಸಲ್ಲಿಸಿದ್ದಾರೆಯೇ;

ಇ) ಹಾಗಿದ್ದಲ್ಲಿ, ಈ ವರದಿಯ ಮುಖ್ಯಾಂಶಗಳೇನು; ಈ ವರದಿಯಲಿ ವಿಶ್ವಿವಿದ್ಯಾಲಯದ ಯಾವ ಯಾವ ಅಧಿಕಾರಿಗಳನ್ನು ಹೆಸರಿಸಲಾಗಿದೆ ಮತ್ತು ಇವರುಗಳ ಮೇಲೆ ಹೊರಸಲಾಗಿರುವ ಆರೋಪಗಳ ವಿವರಗಳೇನು;

ಈ) ಸದರಿ ವರದಿಯ ಆಧಾರದ ಮೇಲೆ ಸರ್ಕಾರವು ಯಾರ ಯಾರ ಮೇಲೆ ಶಿಸ್ತಿನ ಕ್ರಮಗಳನ್ನು ಕೈಗೊಳ್ಳಲಾಗುವುದು;

ಉ) ಮೇಲ್ಕಂಡ ವಿಶ್ವವಿದ್ಯಾಲಯದಲ್ಲಿ ಮಾಡಿ ಕೊಂಡಿರುವ ಅಕ್ರಮ ನೇಮಕಾತಿ ಮತ್ತು ರೋಸ್ಟರ್ ಉಲ್ಲಂಘನೆ ಮಾಡಿ ನೀಡಲಾಗಿರುವ ಬಡ್ತಿಗಳನ್ನು ರದ್ದುಪಡಿಸಲಾಗುವುದೇ?

ಶ್ರೀ ರೇವುನಾಯಕ್ ಬೆಳಮಗಿ: (ಪಶುಸಂಗೋಪನಾ ಸಚಿವರು):–

ಅ) ಪ್ರಾದೇಶಿಕ ಆಯುಕ್ತರು ಗುಲ್ಬರ್ಗಾರವರು ತನಿಖೆ ಮಾಡಿ ಈ ಕೆಳಕಂಡ ಅವ್ಯವಹಾರಗಳು ನಡೆದಿರುವುದಾಗಿ ವರದಿಸಿರುತ್ತಾರೆ.

i) ಸಿಎಎಸ್ ಪದೋನ್ನತಿಗಳು

ii) ಬ್ಯಾಕ್‌ಲಾಗ್ ನೇಮಕಾತಿಗಳು

iii) 62 ಸಹಾಯಕ ಪ್ರಾಧ್ಯಾಪಕರ ನೇರ ನೇಮಕಾತಿಯಲ್ಲಿ ರೋಸ್ಟರ್ ಅನುಸರಿಸದೇ ಇರುವುದು.

iv) ನಿಯಮಾವಳಿಗಳಿಗೆ ವಿರುದ್ಧವಾಗಿ ಗುತ್ತಿಗೆ ನೌಕರರನ್ನು ಬಾಡಿಗೆಗೆ ಪಡೆದಿರುವುದು

v) ಡಾ॥ ಬಸವರಾಜುರವರನ್ನು ಡೀನ್ (ಮೀನುಗಾರಿಗಕೆ) ಆಗಿ ನೇಮಕಾತಿ ಮಾಡಿರುವುದು.

vi) NET ಸರ್ಟಿಫಿಕೇಟ್ ಪಡೆಯದೆ ನೇಮಕಾತಿಗಳನ್ನು ಮಾಡಿರುವುದು

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ಹೌದು

ಇ) ವ್ಯವಸ್ಥಾಪಕ ಮಂಡಳಿ, ಕುಲಪತಿ ಮತ್ತು ಕುಲಸಚಿವರ ಹೆಸರುಗಳನ್ನು ಹೆಸರಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಕಾಯ್ದೆ 2006ರ ಕಲಂ 9(5) ಮತ್ತು (8)ರ ಅನ್ವಯ ಸೂಕ್ತ ಕ್ರಮ ಕೈಗೊಂಡು ಒಂದು ತಿಂಗಳ ಒಳಗೆ ವರದಿ ಮಾಡಲು ಕುಲಪತಿಗಳಿಗೆ ದಿನಾಂಕ 09–06–2010 ಪತ್ರ ಬರೆದಿರುವುದಲ್ಲದೆ ಕಲಂ 9(8)ರಂತೆ ಈ ಸಂಬಂಧ ವ್ಯವಸ್ಥಾಪಕ ಮಂಡಳಿಯ ನಡವಳಿಗಳು ಮತ್ತು ಅವುಗಳನ್ನು ಅನುಸರಿಸಿ ಹೊರಡಿಸಿರುವ ಆದೇಶಗಳನ್ನು ರದ್ದುಪಡಿಸಬಾರದೇಕೆ ಎಂಬುದರ ಬಗ್ಗೆ 15 ದಿನಗಳ ಒಳಗಾಗಿ ವಿವರಣೆ ನೀಡಲು ದಿನಾಂಕ 22–06–2010ರಂದು ಕುಲಪತಿಗಳಿಗೆ ಕಾರಣ ಕೇಳುವ ಪತ್ರ ಜಾರಿ ಮಾಡಲಾಗಿದೆ.

ಉ) ಮೇಲ್ಕಂಡ ಪತ್ರ/ಕಾರಣ ಕೇಳುವ ಪತ್ರಗಳಿಗೆ ಕುಲಪತಿಗಳಿಂದ ಉತ್ತರ ಬಂದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಉತ್ತರ ಒದಗಿಸಿದ್ದಾರೆ, ಅದರಲ್ಲಿ ಬೀದರ್‌ನಲ್ಲಿರುವ ಕರ್ನಾಟಕ ರಾಜ್ಯ ಪಶು ವೈದ್ಯಕೀಯ ಮತ್ತು ಮೀನುಗಾರಿಕೆ ವಿಶ್ವವಿದ್ಯಾಲಯದಲ್ಲಿ ಅಕ್ರಮ ನೇಮಕಾತಿಯಾಗಿದೆ. ಈ ಅಕ್ರಮ ನೇಮಕಾತಿಯಲ್ಲಿ ಸುಮಾರು 15 ಪ್ರೊಫೆಸರ್‌ಗಳಿಗೆ ಪದೋನ್ನತಿಗೆ ಅರ್ಹತೆ ಇಲ್ಲದಿದ್ದರೂ ಪದೋನ್ನತಿಯನ್ನು ನೀಡಿ ಅವರಿಗೆ increment, ಯು.ಜಿ.ಸಿ. ವೇತನ ಕೊಡಲಾಗಿದೆ. ಬ್ಯಾಕ್‌ಲಾಗ್ ನೇಮಕಾತಿಯನ್ನು ನಿಯಮದ ಪ್ರಕಾರ ಮಾಡಲಾಗಿಲ್ಲ. ನಿಯಮಾವಳಿಗಳಿಗೆ ವಿರುದ್ಧವಾಗಿ ಗುತ್ತಿಗೆ ಆಧಾರದಲ್ಲಿ ಸುಮಾರು ನೂರಾರು ನೌಕರರನ್ನು ಬಾಡಿಗೆಗೆ ಪಡೆದಿರುವಂಥದ್ದು, ಇವೆಲ್ಲವೂ ಸಾಬೀತಾಗಿದೆ. ನನ್ನ ಪ್ರಶ್ನೆ ಏನೆಂದರೆ ಅಕ್ರಮವಾಗಿ ಪದೋನ್ನತಿಯನ್ನು ಪಡೆದು ಸರ್ಕಾರದ ಸಂಬಳ, increment ಕೊಟ್ಟಿದ್ದಾರೆ. ಇದರಿಂದ ಸರ್ಕಾರಕ್ಕೆ ಎಷ್ಟು ಹಣ ಖರ್ಚಾಗಿದೆ. ಈ ಹಣವನ್ನು ವಸೂಲಿ ಮಾಡುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತಿದೆ ? ಮತ್ತೆ ಅಕ್ರಮ

ನಡೆದಿರುವ ಬಗ್ಗೆ ನೋಟೀಸ್ ಅನ್ನು ಏನು ಜಾರಿ ಮಾಡಿದ್ದಾರೆ. ಇದಕ್ಕೆ ಎಷ್ಟು ಸಮಯದಲ್ಲಿ ಕೊನೆಗೊಳಿಸುತ್ತಾರೆ ಮತ್ತು ಏನು ಕ್ರಮ ಕೈಗೊಳ್ಳುತ್ತಾರೆ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ರೇವೂ ನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಈಶ್ವರ ಭೀಮಣ್ಣ ಖಂಡ್ರೆಯವರು ಏನು ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಬೀದರ್‌ನಲ್ಲಿರುವ ಕರ್ನಾಟಕ ರಾಜ್ಯ ಪಶುವೈದ್ಯಕೀಯ ಮತ್ತು ಮೀನುಗಾರಿಕೆ ವಿಶ್ವವಿದ್ಯಾಲಯದ ಬಗ್ಗೆ ಸವಿಸ್ತಾರವಾದ ವರದಿಯನ್ನು ಕೊಟ್ಟಿದ್ದಾರೆ. ಆದರೆ ಅವರು ಎಷ್ಟು ಹಣ ಖರ್ಚಾಗಿದೆ ? ಇದರಿಂದ ಸರ್ಕಾರಕ್ಕೆ ಎಷ್ಟು ಹೊರೆಯಾಗಿದೆ ? ಹೇಗೆ ಮಾಡುತ್ತಿರೆಂಬ ಪ್ರಶ್ನೆಯನ್ನು ಅವರು ಕೇಳಿಲ್ಲ. ಅವರ ಮಾಹಿತಿಯನ್ನು ನಂತರ ತರಸಿ ಕೊಡಬಹುದು. ಗುಲ್ಬರ್ಗಾ ಜಿಲ್ಲೆಯ ಆಯುಕ್ತರಾದ ರಜನೀಶ್ ಗೊಯಲ್‌ರವರು promotion, ದಾಖಲಾತಿ, ಡೀನ್ ನೇಮಕಾತಿ ಇರಬಹುದು, ಸರ್ಟಿಫಿಕೇಟ್ ಇಲ್ಲದೆ ನೇಮಕಾತಿ ಇರಬಹುದು, ಆರು ವಿಷಯಗಳ ಮೇಲೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ವಿನಂತಿಸಿದ್ದಾರೆ ಮತ್ತು ಘನತೆವೆತ್ತ ರಾಜ್ಯಪಾಲರಿಗೂ ಒಂದು ವರದಿಯನ್ನು ಕೊಟ್ಟಿದ್ದಾರೆ. ಸರ್ಕಾರಕ್ಕೆ ಜೂನ್ ಮೊದಲನೇ ವಾರದಲ್ಲಿ ಈ ವರದಿ ಬಂದ ತಕ್ಷಣ ಕಾನೂನು ಪ್ರಕಾರ ಯಾವ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕೆಂಬ ಬಗ್ಗೆ ಪರಿಶೀಲನೆ ಮಾಡಿ, ಇಲ್ಲಿ ನಡೆದ ಅವ್ಯವಹಾರದ ಬಗ್ಗೆ ಕರ್ನಾಟಕ ಪಶು ವಿಶ್ವವಿದ್ಯಾಲಯ ಕಾಯ್ದೆ 2004ರ ಕಲಂ 9(4)ರ ಅನ್ವಯ ವಿಶ್ವವಿದ್ಯಾಲಯದ ಬೋರ್ಡ್ ಮುಂದೆ ತನಿಖೆಯ ವಿಚಾರಣಾ ವರದಿಯನ್ನು ಮಂಡಿಸಿ, ಸೂಕ್ತ ಕ್ರಮ ಕೈಗೊಂಡು ಒಂದು ತಿಂಗಳೊಳಗಾಗಿ ವರದಿಯನ್ನು ನೀಡಲು ಉಪ ಕುಲಪತಿಗಳಿಗೆ ನಿರ್ದೇಶನ ನೀಡಲಾಗಿದೆ ನಾವು ಒಂದು ತಿಂಗಳೊಳಗಾಗಿ ಯಾವ ರೀತಿಯಲ್ಲಿ rules regulations ಕಾನೂನಿನ ಚೌಕಟ್ಟಿನಲ್ಲಿ ಯಾವ ರೀತಿ ಬರುತ್ತದೆಂಬುದನ್ನು ನೋಡಿ ವರದಿಯನ್ನು ಸಲ್ಲಿಸಬೇಕೆಂದು ಅವರಿಗೆ ಒಂದು ಪತ್ರವನ್ನು ಕಳುಹಿಸಿದ್ದೇವೆ. ಅದರ ಜೊತೆಯಲ್ಲಿ ಪಶು ವಿಶ್ವವಿದ್ಯಾಲಯ ಕಾಯ್ದೆ 2004ರ ಕಲಂ 9(5)ರಂತೆ ಬೋರ್ಡ್ ಕ್ರಮ ಕೈಗೊಂಡು ಉಪ ಕುಲಪತಿಗಳ ಮೂಲಕ ಸರ್ಕಾರಕ್ಕೆ ವರದಿ ಮಾಡುವಂತೆ ಸೂಚಿಸಲಾಗಿದೆ. ಅವರಿಗೆ ಒಂದು ತಿಂಗಳೊಳಗೆ ವರದಿಯನ್ನು ಸಲ್ಲಿಸಬೇಕೆಂದು ಹೇಳಲಾಗಿದೆ. ಆ ವರದಿ ಬಂದತಕ್ಷಣ ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಇಲ್ಲಿ ಅಕ್ರಮವಾಗಿ ಪದೋನ್ನತಿಯನ್ನು

ಏನು ಕೊಡಲಾಗಿದೆ, ಇದರಿಂದ ಸರ್ಕಾರಕ್ಕೆ ಹಣ ಏನು ನಷ್ಟವಾಗಿದೆ, ಅದು Assistant Professor ನಿಂದ Professor ಹುದ್ದೆ ಕೊಟ್ಟ ಮೇಲೆ ಯು.ಜಿ.ಸಿ. ವೇತನವನ್ನು ಕೊಡಬೇಕಾಗುತ್ತದೆ, increment ಕೊಡಬೇಕಾಗುತ್ತದೆ. ಅಕ್ರಮವಾಗಿ ಗುತ್ತಿಗೆ ಆಧಾರದ ಮೇಲೆ ಏನು ನೇಮಕಾತಿ ಆಗಿದೆ, ಆ ಹಣವನ್ನು ಸರ್ಕಾರ ವಸೂಲಾತಿ ಮಾಡುತ್ತದೆಯೇ ? ಅದರ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರ ಕೊಡಬೇಕೆಂದು ತಮ್ಮ ಮುಖಾಂತರ ಕೇಳುತ್ತೇನೆ. ಅದರ ಜೊತೆಯಲ್ಲಿ ಬೀದರ್ ಜಿಲ್ಲೆಯಲ್ಲಿ ಒಂದೇ ಪಶು ವಿಶ್ವವಿದ್ಯಾಲಯ ಇರುವಂಥದ್ದು. ಇಲ್ಲಿ ನಡೆದಿರುವ ಅಕ್ರಮದ ಬಗ್ಗೆ ಪತ್ರಿಕೆಗಳಲ್ಲಿ ಬರುತ್ತಿದೆ. ಈ ರೀತಿ ವಿವಾದದಲ್ಲಿ ಇದ್ದಾಗ ವಿದ್ಯಾರ್ಥಿಗಳಿಗೆ ವ್ಯಾಸಂಗ ಮಾಡುವುದಕ್ಕೂ ಅನಾನುಕೂಲವಾಗುತ್ತದ. ಇದರ ಬಗ್ಗೆ ಅಂತಿಮ ನಿರ್ಣಯ ಎಷ್ಟು ದಿವಸಗಳಲ್ಲಿ ಆಗುತ್ತದೆ, ಏನು ಕ್ರಮ ತೆಗೆದುಕೊಳ್ಳುತ್ತಾರೆಂಬ ಬಗ್ಗೆ ಖಚಿತವಾಗಿ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, Regional Commissioner ಆಗಿರುವಂಥ ರಜನೀಶ್ ಗೊಯಲ್‌ರವರ ನೇತೃತ್ವದಲ್ಲಿ ಈಗಾಗಲೇ ಸಂಪೂರ್ಣ ತನಿಖೆ ಮಾಡಿ ಸರ್ಕಾರಕ್ಕೆ ಮಾಹಿತಿಯನ್ನು ಕೊಟ್ಟಿದ್ದಾರೆ ಮತ್ತು ಮಾನ್ಯ ರಾಜ್ಯಪಾಲರಿಗೂ ಕೊಟ್ಟಿದ್ದಾರೆ. ವರದಿ ಕೊಟ್ಟು ಇಷ್ಟು ವರ್ಷಗಳಾದ ಮೇಲೂ ಕೂಡ ನೀವು "ಇನ್ನೂ ನಾವು ಕ್ರಮ ತೆಗೆದುಕೊಳ್ಳುತ್ತೇವೆ, ಅದು ಬಂದ ಮೇಲೆ ಮಾಡುತ್ತೇವೆ" ಎಂದರೆ ಇದು ಹೇಗೆ ಸರಿಯಾಗುತ್ತದೆ ? ಇದು ಏನಾಗುತ್ತದೆ ಎಂದರೆ, ಇಲ್ಲಿಯವರೆಗೂ promotion ಕೊಟ್ಟಿರುವವರಿಗೆ, appointment ಆಗಿರುವವರಿಗೆ 2-3 ವರ್ಷ ಆಯಿತು ಎಂದರೆ ಅವರು ಇನ್ನೊಂದು ರೀತಿ ಹೋರಾಟವನ್ನು ಶುರು ಮಾಡುತ್ತಾರೆ. ಯಾವುದೇ ವರದಿ ಬಂದರೂ, ದಯಮಾಡಿ ಕೂಡಲೇ ಕ್ರಮ ತೆಗೆದುಕೊಳ್ಳುವಂಥ ರೀತಿಯಲ್ಲಿ ಕ್ರಮ ಜರುಗಿಸಬೇಕೇ ಹೊರತು ಬರೀ ನಿಯಮಾವಳಿಗಳನ್ನೇ ಹೇಳಿಕೊಂಡು, ಕ್ರಮ ತೆಗೆದುಕೊಳ್ಳುತ್ತೇವೆ ಎಂದರೆ ಆಗುವುದಿಲ್ಲ. ನೀವು ಹೇಳುವ ವೇಗವನ್ನು ನೋಡಿದರೆ, ಇನ್ನು ಮೂರು ವರ್ಷವಾದರೂ ಏನೂ ಆಗುವುದಿಲ್ಲವೆಂದು ನಾನು ಹೇಳುತ್ತೇನೆ. ಇದರಿಂದ ಯೂನಿವರ್ಸಿಟಿಗೆ ಏನು ಪ್ರಯೋಜನವಾಗುತ್ತದೆ ? ಯೂನಿವರ್ಸಿಟಿಯ prestige ಏನು ಉಳಿಯುತ್ತದೆ ? ಅದರ administration ಏನು ಉಳಿಯುತ್ತದೆ? ಬೆಳಗ್ಗೆ ಎದ್ದರೆ, ಒಂದಲ್ಲ ಒಂದು ಯೂನಿವರ್ಸಿಟಿಯ ಹಗರಣಗಳು ಈಚೆಗೆ ಬರುತ್ತಿವೆ. ಅದನ್ನೇ ನೋಡಿಕೊಂಡು ಕುಳಿತುಕೊಂಡಿರುವುದಾಗಿದೆ. ಒಂದು ಕಡೆ ನೀವು ಯೂನಿವರ್ಸಿಟಿಗಳನ್ನು ಮಾಡುತ್ತೀರಿ, ಇನ್ನೊಂದು ಕಡೆ ನೀವು ಅವುಗಳನ್ನು ನಿಯಂತ್ರಣ ಮಾಡದಿದ್ದರೆ ಹೇಗೆ ಸರಿಯಾಗುತ್ತದೆ

ಎಂದು ಹೇಳಿ.

ಶ್ರೀ ರೇವುನಾಯಕ್ ಬೆಳಮಗಿ : ಸನ್ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಜಯಚಮದ್ರರವರು ಹೇಳಿದ್ದಾರೆ ಮತ್ತು ಸದಸ್ಯರಾದ ಈಶ್ವರ ಖಂಡ್ರೆಯವರೂ ಸಹ, ಸರ್ಕಾರದ ಮೇಲೆ ಎಷ್ಟು ಹಣದ ಭಾರ ಬಿದ್ದಿದೆ, ಅದನ್ನು ಯಾವಾಗ ವಸೂಲು ಮಾಡುತ್ತೀರಿ ಎಂದು ಹೇಳಿದ್ದಾರೆ. ಅವರು ಇದನ್ನು ತಮ್ಮ ಪ್ರಶ್ನೆಯಲ್ಲಿ ಕೇಳಿಲ್ಲ, ಈಗ ಕೇಳುತ್ತಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಹಿರಿಯ ಸದಸ್ಯರು ಏನು ಹೇಳಿದರು, ಅದನ್ನು ಒಂದು ತಿಂಗಳೊಳಗಾಗಿ ಮಾಡಲು ಸರ್ಕಾರ ಬದ್ಧವಿದೆ, ಅವರು ಎಷ್ಟು ಎತ್ತರದ ಸ್ಥಾನದಲ್ಲಿದ್ದರೂ ಕೂಡ ನನು ಕ್ರಮ ಕೈಗೊಳ್ಳುತ್ತೇನೆ.

ಪಶು ಚಿಕಿತ್ಸಾ ಕೇಂದ್ರ ಪ್ರಾರಂಭಿಸುವ ಬಗ್ಗೆ

114 (359) ಶ್ರೀ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ):– ಪಶುಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಸೇಡಂ ತಾಲ್ಲೂಕಿನ ಹಂದರಕಿ, ಮೇಧಕ ಮತ್ತು ನೀಲಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಜಾನುವಾರುಗಳ ಸಂಖ್ಯೆ ಹೆಚ್ಚಿದ್ದು ; ಹಂದರಕಿ, ಮೇದಕ, ನೀಲಹಳ್ಳಿ ಮತ್ತು ಚಿಂಚೋಳಿ ತಾಲ್ಲೂಕಿನ ಕರ್ಚಖೇಡ ಗ್ರಾಮದಲ್ಲಿ ಪಶು ಚಿಕಿತ್ಸಾ ಕೇಂದ್ರ ಸ್ಥಾಪನೆ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮವೇನು ;

ಆ) ಸೇಡಂ ಮತ ಕ್ಷೇತ್ರದಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು ; ಎಂದು ಭರ್ತಿ ಮಾಡಲಾಗುವುದು ?

ಶ್ರೀ ರೇವು ನಾಯಕ್ ಬೆಳಮಗಿ : (ಪಶುಸಂಗೋಪನಾ ಸಚಿವರು):–

ಅ) ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನ ಅನ್ವಯ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುವೈದ್ಯಕೀಯ ಸಂಸ್ಥೆ ಇರಬೇಕಾಗುತ್ತದೆ. ಇದರಂತೆ 18ನೇ ಜಾನುವಾರು ಗಣತಿ 2007ರಂತೆ ಸೇಡಂ ತಾಲ್ಲೂಕಿನಲ್ಲಿ 82,107 ಜಾನುವಾರು ಘಟಕಗಳಿದ್ದು, 17 ಪಶುವೈದ್ಯಕೀಯ ಸಂಸ್ಥೆಗಳ ಅವಶ್ಯಕತೆ ಇದ್ದು, ಪ್ರಸ್ತುತ 19 ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು, ಎರಡು ಸಂಸ್ಥೆಗಳು ಹೆಚ್ಚಿಗೆ ಇರುತ್ತದೆ. ಹಾಗೆಯೇ ಚಿಂಚೋಳಿ ತಾಲ್ಲೂಕಿನಲ್ಲಿ 1,13,481 ಜಾನುವಾರು ಘಟಕಗಳಿದ್ದು, 23 ಪಶುವೈದ್ಯಕೀಯ ಸಂಸ್ಥೆಗಳ ಅವಶ್ಯಕತೆ ಇದ್ದು, ಪ್ರಸ್ತುತ 28 ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, 5 ಸಂಸ್ಥೆಗಳು ಹೆಚ್ಚಾಗಿರುತ್ತದೆ.